# ಆತ್ಮನಾವ ಕುಲ? ಜೀವನಾವ ಕುಲ..?

ಕರ್ನಾಟಕದಲ್ಲಿ ವಚನಕಾರರಂತಯೇ ಹರಿದಾಸರನ್ನೂ ತೀವ್ರವಾಗಿ ಕಾಡಿದ ಅಂಶವೆಂದರೆ ಜಾತಿಯ ಕಾರಣದಿಂದ ಕಾಣಿಸಿಕೊಳ್ಳುವ ಸಾಮಾಜಿಕ ಅಸಮಾನತೆ, ಹುಟ್ಟಿನಿಂದಲೇ ಮನುಷ್ಯನಿಗೆ ಅಂಟಿಕೊಳ್ಳುವ 'ಜಾತಿ' ಎಂಬ ಉಪಾದ್ರಿಯಿಂದಾಗಿ ಶ್ರೇಷ್ಠತೆ– ನಿಕೃಷ್ಟತೆಗಳ ನಿರ್ಧಾರವಾಗುವುದು ಅನೈಸರ್ಗಿಕ ಹಾಗೂ ಅಮಾನವೀಯ ಎಂಬುದು ಈ ಎರಡೂ ಪಂಥದವರ ಅಭಿಪ್ರಾಯ. ಈ ಜಾತಿ ಪದ್ಧತಿಯನ್ನು ತೊಡೆದುಹಾಕಲು ಬಸವಣ್ಣನವರು ಏನೆಲ್ಲ ರೀತಿಯಲ್ಲಿ ಹೋರಾಡಿದರೆಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಹರಿದಾಸರು ಇಂಥ ಪ್ರಾಯೋಗಿಕ ಪ್ರಯತ್ನಕ್ಕೆ ಕೈ ಹಾಕದಿದ್ದರೂ, ಈ ದಿಕ್ಕಿನಲ್ಲಿ ಜನಗಳಿಗೆ ತಿಳಿ ಹೇಳುವ ಕೆಲಸವನ್ನು ಸಾಕಷ್ಟು ಮಾಡಿದ್ದಾರೆಂಬುದು ಅವರ ಹಾಡುಗಳಲ್ಲಿ ಪ್ರಕಟವಾಗುತ್ತದೆ.



'ಹೊಲಯ ಹೊರಗಿಹನೆ? ಊರೊಳಗಿಲ್ಲವೆ?' ಎಂದು ನೇರವಾಗಿ ಪ್ರಶ್ನಿಸುವ ಪುರಂದರ ದಾಸರು 'ಹೊಲಯ' ಎಂಬುದು ಜಾತಿ ಸೂಚಕವಲ್ಲ, ಶೀಲ ಸೂಚಕ– ಎಂದು ಸ್ಪಷ್ಟವಾಗಿ ಸೂಚಿಸಿದ್ದಾರೆ, ಅವರ ಪ್ರಕಾರ– 'ಇದ್ದೂ ದಾನವ ಮಾಡದವ' 'ಉಂಡಮನೆಗೆ ಎರಡ ಬಗೆಯುವವ– ಇಂಥವರೆಲ್ಲ ಹೊಲಯರು, 'ಬ್ರಾಹ್ಮಣನೆಂದರೆ ಬ್ರಹ್ಮನ ತಿಳಿದವನು' ಎಂಬ ವ್ಯಾಖ್ಯೆಯನ್ನು ಕೊಟ್ಟ ದಾಸರು ಜಾತಿ ಎಂಬುದು ಅರ್ಹತೆಯ ಮೇಲಿಂದ ಬರಬೇಕಾದುದು ಎಂಬುದನ್ನು ಸೂಚಿಸಿದ್ದಾರೆ; 'ತನುವಿನ ಕೋಪ ಹೊಲೆ'... 'ಪರಧನ ಪರಸತಿ ಹೊಲೆ' ಎಂಬಂಥ ಮಾತುಗಳಲ್ಲಿ ನಿಜವಾದ 'ಹೊಲೆತನ'ದ ವಿಶ್ಲೇಷಣೆ ಮಾಡಿದ್ದಾರೆ.

ಹುಟ್ಟಿನಿಂದ ದಲಿತವರ್ಗಕ್ಕೆ ಸೇರಿದ್ದ ಕನಕದಾಸರಿಗೆ ಜಾತಿಯ ಕಾರಣದಿಂದಾಗುವ ನೋವು ಸ್ವಾನುಭವವಾಗಿತ್ತು. ಕುಲಜರೆನ್ನಿಸಿಕೊಂಡವರು ಸಮಾಜದಲ್ಲಿನ ಕೆಳವರ್ಗದವರನ್ನು ಹೇಗೆ ಕೀಳಾಗಿ ಕಾಣುತ್ತಿದ್ದರೆಂಬುದನ್ನು ಅವರು ಸ್ವತಃ ಅನುಭವಿಸಿದ್ದರು. ಅವರ ಕಾವ್ಯ 'ರಾಮಧಾನ್ಯ ಚರಿತ್ರೆ'ಯಲ್ಲಿ ರಾಗಿಯ ಬಾಯಿಯಿಂದ ಬರುವ ಮಾತುಗಳು ದಲಿತವರ್ಗದವರ ಪ್ರತಿಭಟನೆಯ ಮಾತುಗಳಲ್ಲದೆ ಬೇರೆಯಲ್ಲ, ತಮ್ಮ ಅನೇಕ ಕೀರ್ತನೆಗಳಲ್ಲಿ ಕನಕದಾಸರು ಕುಲದ ಕಲ್ಪನೆಯನ್ನು ಹಿಂಜಿ ಹಿಂಜಿ ವಿಶ್ಲೇಷಿಸಿದ್ದಾರೆ. ಇದರ ಹಿಂದೆ ಅವರ ವೈಯಕ್ತಿಕ ನೋವಿನ ಮಿಡಿತದ ಜೊತೆಗೆ ಸಮಾಜ ಸುಧಾರಣಾ ಪ್ರವೃತ್ತಿಯೂ ಕೆಲಸ ಮಾಡಿದೆ. 'ಕುಲ ಕುಲ ಕುಲವೆನ್ನುತಿಹರೋ! ಕುಲ ವಾವುದು ಸತ್ಯ ಜನರಿಗೆ?' ಎಂಬ ಅವರ ಪ್ರಶ್ನೆಯಲ್ಲಿನ ಕಳಕಳಿಯನ್ನು ಗಮನಿಸಬೇಕು. ತಾವರೆ ಕೆಸರಿನಲ್ಲಿ ಹುಟ್ಟಿದರೂ ಪೂಜಾರ್ಹವಾಗುತ್ತದೆ; ಹಸುವಿನ ಕೆಚ್ಚಲಲ್ಲಿ ಬರುವ ಹಾಲನ್ನು 'ಭೂಸುರ'ರೆನ್ನಿಸಿಕೊಂಡವರು ಪವಿತ್ರವೆಂದು ಪರಿಗಣಿಸುತ್ತಾರೆ, ಅಷ್ಟು ಮಾತ್ರವಲ್ಲ, ಪರಾಶರ, ವಶಿಷ್ಟ, ನಾರದ– ಮುಂತಾದ ಋಷಿಗಳು ಹುಟ್ಟಿನಿಂದ ಬ್ರಾಹ್ಮಣರೇನಲ್ಲ. ಹೀಗೆ ಬೇರೆ ಬೇರೆ ಉದಾಹರಣೆಗಳ ಮೂಲಕ ಕನಕರು ಮನುಷ್ಯನ ಪಾಲಿಗೆ ಶ್ರೇಷ್ಠತೆ ಬರುವುದು ಕುಲದಿಂದಲ್ಲ ಅಂತಃಸತ್ವದಿಂದ, ಆಚಾರದಿಂದ ಎಂಬುದನ್ನು ಸಮರ್ಥಿಸಿದ್ದಾರೆ, 'ಆತ್ಮನಾವಕುಲ? ಜೀವನಾವಕುಲ? ತತ್ತ್ವೇಂದ್ರಿಯಗಳ ಕುಲ ಹೇಳಿರಯ್ಯ?' ಇವು ಕೇವಲ ಕನಕದಾಸರೊಬ್ಬರ ಪ್ರಶ್ನೆಯಲ್ಲ. 'ಮನುಷ್ಯ ಜಾತಿ ತಾನೊಂದೆ ವಲಂ!' ಎಂದು ಘೋಷಿಸಿದ ಆದಿ ಕವಿ ಪಂಪನೂ. ಕರ್ಣನ ಬಾಯಿಯಲ್ಲಿ ಇಂಥದೇ ಮಾತುಗಳನ್ನಾಡಿಸಿದ್ದಾನೆ. ಆತ್ಮ, ಜೀವ, ಇಂದ್ರಿಯಗಳು ಕುಲದ ಕಲ್ಪನೆಗೆ ಅತೀತ ವಾದವುಗಳು, ಆದ್ದರಿಂದ ದೇಹಕ್ಕೆ ಮಾತ್ರ ಜಾತಿಯ ಮೇಲ್ಮೆ ಕೀಳ್ಮೆಗಳನ್ನು ಅಂಟಿಸುವುದು ಯಾವ ನ್ಯಾಯ? ಎನ್ನುತ್ತಾರೆ ಕನಕದಾಸರು. 'ಈ ದೇಹದಲಿ ನೀ ನೆಲಸಿರಲು ಹೊಲೆಯುಂಟೆ?' ಎಂಬ ಹರಿಭಕ್ತ ಸಾರದ ಮಾತು ಭಗವಂತನ ವಾಸಸ್ಥಾನವಾಗಿರುವ ದೇಹ ಹುಟ್ಟಿನ ಕಾರಣಕ್ಕಾಗಿ ಕೀಳಾಗದು ಎಂಬುದನ್ನು ಸಮರ್ಥಿಸುತ್ತದೆ.

■ ವೈನತೇಯ

# ಮಾತೇ ಮುತ್ತು

ಪ್ರೇಮ 'ದಾರಿ'ಯನ್ನು ಹುಡುಕಿದರೆ, ಅಲಕ್ಷ್ಯ 'ನೆಪ' ಹುಡುಕುತ್ತದೆ.
-ನೈಜೀರಿಯಾ ಗಾದೆ

ಹೋಗಲು ಅಸಾಧ್ಯವಾದ ಕಡೆಗಳಿಗೂ 'ಪ್ರೇಮ' ಹೇಗೋ ನುಸುಳಿಕೊಂಡು ಹೋಗುತ್ತದೆ.
-ಶೇಕ್ಸ್‌ಪಿಯರ್

ಪ್ರೇಮಿಸುವ ಹೆಂಗಸು ಯಾವಾಗಲೂ ಸತ್ಯ ಹೇಳುತ್ತಾಳೆ. ಆದರೆ ಪೂರ್ಣ ಸತ್ಯವನ್ನಲ್ಲ.
-ಇಟಲಿ ಗಾದೆ

ಪ್ರೇಮಕ್ಕೆ ಒಂದೇ ಕಣ್ಣು ಇರಬಹುದು; ಆದರೆ ದ್ವೇಷಕ್ಕೆ ಎರಡು ಕಣ್ಣೂ ಇರುವುದಿಲ್ಲ.
-ಇಟಲಿ ಗಾದೆ

ನಿಮ್ಮ ಸೃಷ್ಟಿಕರ್ತನನ್ನು ನೀವು ಪ್ರೇಮಿಸುತ್ತೀರೆಂದು ತಿಳಿದಿದ್ದೀರಾ? ಹಾಗಾದರೆ ಮೊದಲು ನಿಮ್ಮ ಸಹಜೀವಿಗಳನ್ನು ಪ್ರೇಮಿಸಿ.
-ಮಹಮ್ಮದ್ ಪೈಗಂಬರ್

ಬಿತ್ತಿದಂತೆಯೇ ಹೊರತು, ಬಯಸಿದಂತಲ್ಲ ಬೆಳೆ.
-ಕೆ.ಎಸ್.ನಿಸಾರ್ ಅಹಮ್ಮದ್

ಹರಕು ಬಟ್ಟೆಯವರನ್ನು ಕಂಡರೆ ಅತ್ಯಂತ ತಿರಸ್ಕಾರ ತೋರುವ ಜನರೇ ಬಡತನ ನಿವಾರಿಸ ಹೊರಟಿರುವುದು ಈ ಶತಮಾನದ ಒಂದು ಸೋಜಿಗ.
-ಗೋಪಾಲಕೃಷ್ಣ ಅಡಿಗ

ಯುವಕರು 'ಪ್ರಾಮಾಣಿಕ' ಪ್ರೇಮಿಗಳಾಗಿರಬೇಕೆನ್ನುತ್ತಾರೆ– ಆಗಿರಲಾರರು. ಮುದುಕರು 'ಅಪ್ರಾಮಾಣಿಕ' ಪ್ರೇಮಿಗಳಾಗಿರಬೇಕೆನ್ನುತ್ತಾರೆ– ಆಗಿರಲಾರರು.
-ಆಸ್ಕರ್ ವೈಲ್ಡ್

ಬದುಕಿನ ಮೂರು ಮಹಾ ಶತ್ರುಗಳೆಂದರೆ ಅವಿದ್ಯೆ, ಅನಾರೋಗ್ಯ ಮತ್ತು ದಾರಿದ್ರ್ಯ. ಮನುಷ್ಯನ ಎಲ್ಲ ಪ್ರಯತ್ನಗಳೂ ಈ ಮೂರನ್ನು ಪರಿಹರಿಸಿಕೊಳ್ಳುವುದರ ಕಡೆಗೇ.
-ಹಾ.ಮಾ.ನಾಯಕ

ಹಣ ಕೂಡಿ ಹಾಕುವವನು ಮನಸ್ಸಿನಲ್ಲಿ ಬಡವ; ತೃಪ್ತನಾದವನು ಹೊರನೋಟಕ್ಕೆ ಬಡವ.
-ಚೀನಾ ಗಾದೆ

ಬರವಣಿಗೆ ನಮ್ಮನ್ನು ಕರಾರುವಾಕ್ಕಾದ ಮನುಷ್ಯರನ್ನಾಗಿಸುತ್ತದೆ.
-ಫ್ರಾನ್ಸಿಸ್ ಬೇಕನ್

ಬಾಳು ಇರುವುದು ಬದುಕುವುದಕ್ಕಾಗಿ; ಬದುಕಿನಿಂದ ಬೆಳೆಯುವುದಕ್ಕಾಗಿ.
-ಶಿವರಾಮ ಕಾರಂತ

ಬರವೇ ಇರಲಿ, ಸಮೃದ್ಧಿ ಬರಲಿ, ತಾಳುವ ಬಾಳಿನ ಬಾವುಟವಿರಲಿ.
-ಕೆ.ಎಸ್.ನರಸಿಂಹಸ್ವಾಮಿ

ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ? ಧನವಿದ್ದು ಫಲವೇನು ದಯವಿಲ್ಲದನ್ನಕ್ಕ?
-ಅಕ್ಕಮಹಾದೇವಿ